# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

ದಿನಾಂಕ: 13-09-2023 ರಂದು ಮಧ್ಯಾಹ್ನ 3:00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 61ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತ ಶೈಕ್ಷಣಿಕ ಮಂಡಳಿ ಸದಸ್ಯರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. |
| **ಪ್ರೊ. ಎನ್. ಲಕ್ಷ್ಮಿ**<br>ಡೀನ್ (ಶೈಕ್ಷಣಿಕ),<br>ಮತ್ತು ಸ್ಕೂಲ್ ನಿರ್ದೇಶಕರು, ಶಿಕ್ಷಣ ನಿಕಾಯ,<br>ಕರಾಮುವಿ, ಮೈಸೂರು. | **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. |
| **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ,<br>ಮೈಸೂರು | **ಪ್ರೊ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು)<br>ಕರಾಮುವಿ, ಮೈಸೂರು. |
| **ಸ್ಕೂಲ್ ನಿರ್ದೇಶಕರು** | |
| **ಶ್ರೀಮತಿ ಸುನೀತ** | ವಿಜ್ಞಾನ ನಿಕಾಯ |
| **ಪ್ರೊ. ಸಿ. ಮಹದೇವಮೂರ್ತಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ರಮಾನಂದ ಎಂ. ಎಸ್** | ವಾಣಿಜ್ಯ ನಿಕಾಯ |
| **ಡಾ. ಶಂಕರನಾರಣಪ್ಪ** | ಸಮಾಜ ವಿಜ್ಞಾನ ನಿಕಾಯ |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್. ಎಸ್**<br>ನಿರ್ದೇಶಕರು, CIQA, ಕರಾಮುವಿ, ಮೈಸೂರು. | |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಶಾಸನಬದ್ಧ ಅಧಿಕಾರಿಗಳು, ಮಾನ್ಯ ಸದಸ್ಯರುಗಳನ್ನು ಹಾಗೂ ಸ್ಕೂಲ್ ನಿರ್ದೇಶಕರುಗಳನ್ನು 61ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಗೆ ಸ್ವಾಗತಿಸಿ ಕಾರ್ಯಸೂಚಿಯಂತೆ ವಿಷಯವನ್ನು ಸಭೆಗೆ ಮಂಡಿಸಿದರು.

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 61.01**

ವಿಷಯ: ಕರಾಮುವಿಯಲ್ಲಿ ಹೊಸದಾಗಿ ರಚಿಸಿರುವ ಪರಿನಿಯಮಗಳ ಕರಡನ್ನು ಸಿದ್ಧಪಡಿಸಿ, ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಿರುವ ಬಗ್ಗೆ.

-----

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯು.ಜಿ.ಸಿ ಯ "ಮುಕ್ತ ಮತ್ತು ದೂರ ಶಿಕ್ಷಣ ಕಲಿಕೆ" ಯ ನಿಯಮಾವಳಿ-2020 ರ ಪ್ರಕಾರ, **'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ'** ಎಂಬ ಧ್ಯೇಯ ವಾಕ್ಯದ ಅನುಸಾರ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುತ್ತಾ ಬಂದಿರುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಬೆಳವಣಿಗೆಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಸಂಬಂಧ ಈ ಕೆಳಕಂಡ ಕರಡು ಪರಿನಿಯಮಗಳನ್ನು ರಚಿಸಲಾಗಿರುತ್ತದೆ.

| Sl No. | Details of the Statutes |
|---|---|
| 1 | Draft Statutes Governing "The Creation and Institution of Non-Teaching Posts (Administrative Posts)" At the Regional Centre - Required to carry out the Administrative work-load of the Open, Distance Learning and also center for Online Programmes - As per the UGC (Open, Distance Learning and Online Higher Education Programmes) Regulations – 2020. |
| 2 | Draft Statutes Governing "The Establishment of Online Education Programmes (Comprising Post Graduate / Graduate Programmes) in Open and Distance Learning Programmes in Karnataka State Open University (KSOU) Creation and Institution of Faculty position therein as per the UGC (Online Programmes) Regulations - 2020. |
| 3 | Draft Statutes Governing "the Establishment of Department of Studies----------- (Comprising post Graduate/ Graduate Programmes) In Open and Distance Learning Programmes in Karnataka State Open university (KSOU) – Creation and Institution of Faculty Positions therein as per the UGC (Online Programmes) Regualtions, 2020. |
| 4 | Draft Statutes Governing "the Creation and Institution of Technical and non Technical posts at the Audio visual studio KSOU campus – Required to carry out the audio and video production work load for the open , Distance Learning and also center for Online Programmes – As per the UGC (Open, Distance Learning and Online Higher Education Programmes) Regulations – 2020. |
| 5 | Draft Statutes Governing "The Student welfare officer post at student welfare center KSOU campus – for ODL and Online Programmes – As per the UGC (Open, Distance Learning and Online Higher Education Programmes) Regulations – 2020. |

ಈ ಮೇಲ್ಕಂಡ ಕರಡು ಪರಿನಿಯಮಗಳನ್ನು ದಿನಾಂಕ: 13-09-2023ರಂದು ಜರುಗುವ 61ನೇ ಸಾಮಾನ್ಯ ಶೈಕ್ಷಣಿಕ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ: ಹೊಸದಾಗಿ ರಚಿಸಿರುವ ಸದರಿ ಪರಿನಿಯಮಗಳನ್ನು ವಿವಿಯ ಕಾಯ್ದೆಗೆ ಅನುಗುಣವಾಗಿ ಕುಲಾಧಿಪತಿಗಳಿಂದ ಅಂಕಿತ ಪಡೆಯಲು ಶೈಕ್ಷಣಿಕ ಮಂಡಳಿಯು ಒಮ್ಮತದಿಂದ ಒಪ್ಪಿಗೆ ಸೂಚಿಸಿತು.**

----

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 61.02

ವಿಷಯ: ವಿವಿಯಲ್ಲಿ Centre for Online Education ಸ್ಥಾಪಿಸುವ ಬಗ್ಗೆ.

* * * * *

ವಿಶ್ವವಿದ್ಯಾನಿಲಯಕ್ಕೆ ಜುಲೈ 2023–24 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ಪದವಿ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಪ್ರಾರಂಭಿಸಲು F.No. 39-2/2023 (DEB-I) dated: 17.08.2023 ರಂತೆ ಯು.ಜಿ.ಸಿ. ಮಾನ್ಯತೆ ನೀಡಿದ್ದು ಪ್ರವೇಶಾತಿ ಹಾಗೂ ಇತರೆ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಬೇಕಾಗಿರುವ ಹಿನ್ನೆಲೆಯಲ್ಲಿ ಸುಸೂತ್ರ ಆಡಳಿತ ನಿರ್ವಹಣೆ ದೃಷ್ಟಿಯಿಂದ ವಿವಿಯಲ್ಲಿ Centre for Online Education ಸ್ಥಾಪಿಸಬೇಕಾಗಿದ್ದು. ಈ ಸಂಬಂಧ ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

**ಯು.ಜಿ.ಸಿ. ಮಾನ್ಯತೆ ಹೊಂದಿರುವ ಸ್ನಾತಕ ಶಿಕ್ಷಣಕ್ರಮಗಳು**

| ಶಿಕ್ಷಣಕ್ರಮಗಳು | ಅವಧಿ |
|---|---|
| ಬಿ.ಎ | 3 ವರ್ಷಗಳು |
| ಬಿ.ಕಾಂ | . 6 ಸೆಮಿಸ್ಟರ್‌ಗಳು |

**ಯು.ಜಿ.ಸಿ. ಮಾನ್ಯತೆ ಹೊಂದಿರುವ ಸ್ನಾತಕೋತ್ತರ ಶಿಕ್ಷಣಕ್ರಮಗಳು**

| ಶಿಕ್ಷಣಕ್ರಮಗಳು | ಅವಧಿ |
|---|---|
| ಎಂ.ಎ– ಕನ್ನಡ | 4 ಸೆಮಿಸ್ಟರ್‌ಗಳು |
| ಎಂ.ಎ – ಇಂಗ್ಲೀಷ್ | 4 ಸೆಮಿಸ್ಟರ್‌ಗಳು |
| ಎಂ.ಎ – ಹಿಂದಿ | 4 ಸೆಮಿಸ್ಟರ್‌ಗಳು |
| ಎಂ.ಎ – ಸಂಸ್ಕೃತ | 2 ವರ್ಷಗಳು |
| ಎಂ.ಎ – ಅರ್ಥಶಾಸ್ತ್ರ | 4 ಸೆಮಿಸ್ಟರ್‌ಗಳು |
| ಎಂ.ಕಾಂ | 4 ಸೆಮಿಸ್ಟರ್‌ಗಳು |
| ಎಂ.ಬಿ.ಎ | 4 ಸೆಮಿಸ್ಟರ್‌ಗಳು |
| ಎಂ.ಎಸ್ಸಿ– ಗಣಿತಶಾಸ್ತ್ರ | 4 ಸೆಮಿಸ್ಟರ್‌ಗಳು. |

ತೀರ್ಮಾನ: **ವಿವಿಯಲ್ಲಿ Centre for Online Education ಸ್ಥಾಪಿಸುವ ಬಗ್ಗೆ ಅನುಮೋದಿಸಲಾಯಿತು. ಮುಂದುವರೆದು ಶ್ರೀಮತಿ ಸುನೀತ, ಸಹ ಪ್ರಾಧ್ಯಾಪಕರು, ಗಣಕಯಂತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು Centre for Online Education ನಿರ್ದೇಶಕರನ್ನಾಗಿ ನೇಮಿಸಲು ಒಪ್ಪಿಗೆ ಸೂಚಿಸಿತು.**

----

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 61.03**

ವಿಷಯ: ಆನ್‌ಲೈನ್ ಶಿಕ್ಷಣಕ್ರಮಗಳಿಗೆ ಶುಲ್ಕ ಹಾಗೂ ಶೈಕ್ಷಣಿಕ ಅರ್ಹತೆಗಳನ್ನು ನಿಗದಿಪಡಿಸುವ ಬಗ್ಗೆ.

******

ವಿಶ್ವವಿದ್ಯಾನಿಲಯಕ್ಕೆ ಜುಲೈ 2023–24 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ಪದವಿ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಪ್ರಾರಂಭಿಸಲು F.No. 39-2/2023 (DEB-I) dated: 17.08.2023 ರಂತೆ ಯು.ಜಿ.ಸಿ. ಮಾನ್ಯತೆ ನೀಡಿದ್ದು ಸದರಿ ಶಿಕ್ಷಣಕ್ರಮಗಳಿಗೆ ಶೈಕ್ಷಣಿಕ ಅರ್ಹತೆಗಳು, ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಗಳನ್ನು ನಿಗದಿ ಪಡಿಸುವ ಸಂಬಂಧ ದಿನಾಂಕ: 23.08.2023 ರಂದು ವಿವಿಯ ಪರಿಣಿತರ ಸಲಹಾ ಸಮಿತಿ ಸಭೆ ನಡೆದಿದ್ದು, ಸಮಿತಿಯು ಅಗತ್ಯ ರೂಪುರೇಷೆಗಳನ್ನು ಚರ್ಚಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

## Admission fee:

| Sl No | Programme | Year | Processing fee | Registration fee | Library Fee | Alumni Fee | Tuition fee | Total Fee | Foreign Students |
|---|---|---|---|---|---|---|---|---|---|
| 1 | B.A | I | 1000 | 1000 | 500 | 500 | 7000 | 10000 | Indian Fee+250 USD |
| | | II | 1000 | | 500 | | 8500 | 10000 | |
| | | III | 1000 | | 500 | | 8500 | 10000 | |
| 2 | B.COM | I | 1000 | 1000 | 500 | 500 | 9000 | 12000 | Indian Fee+250 USD |
| | | II | 1000 | | 500 | | 10500 | 12000 | |
| | | III | 1000 | | 500 | | 10500 | 12000 | |
| 3 | MA- Kannada, English, Hindi, Sanskrit, Economics | I | 1000 | 1000 | 500 | 500 | 12000 | 15000 | Indian Fee+250 USD |
| | | II | 1000 | | 500 | | 13500 | 15000 | |
| 4 | M.COM | I | 1000 | 1000 | 500 | 500 | 17000 | 20000 | Indian Fee+300 USD |
| | | II | 1000 | | 500 | | 18500 | 20000 | |
| 5 | M.B.A | I | 2000 | 1000 | 500 | 500 | 36000 | 40000 | Indian Fee+300 USD |
| | | II | 2000 | | 500 | | 37500 | 40000 | |
| 6 | M.Sc Mathamatics | I | 1000 | 1000 | 500 | 500 | 37000 | 40000 | Indian Fee+300 USD |
| | | II | 1000 | | 500 | | 38500 | 40000 | |

## Examination fee:

| Programme | One Paper | Two Papef | Three Paper | Four & Above | Full Fee |
|---|---|---|---|---|---|
| B.A | 1500 | 2000 | 2500 | 3000 | 3000 |
| B.COM | 1500 | 2000 | 2500 | 3000 | 3000 |
| M.A | 1500 | 2000 | 2500 | 3000 | 3000 |
| M.COM | 1500 | 2000 | 2500 | 3000 | 3000 |
| MBA | 1500 | 2000 | 2500 | 3000 | 3000 |
| M.Sc. | 1500 | 2000 | 2500 | 3000 | 3000 |

ಕುಲಸಚಿವರು

ಕುಲಪತಿಗಳು

**Note:**

- Change of Name / Re-enrollment Fee/ Study Centre (Whichever is applicable)- Rs. 1000
- Study certificate for NRI students/ Tibetian candidates studied in Karnataka minimum period of 5 years/ eligibility Fee for students residing/ studied outside Karnataka/ Re-enrollment Fee after two years break/ Bonafide certificate (Whichever is applicable)- Rs. 2000
- MPP for level-1 Fees- Rs. 1000
- The conversion rate taken into consideration for the fee remittance, i.e (USD vs INR) is as per the first working day of the month of Reserve Bank of India.

The Committee by consensus agreed to retain the same eligibility criteria as prescribed in the offline Programmes for the online programmes also.

ಸದರಿ ಸಮಿತಿಯು ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆಗಳು, ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಗಳನ್ನು ಅನುಮೋದಿಸುವ ಬಗ್ಗೆ ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ:**

1. **ಮೇಲಿನ ವಿಷಯದಲ್ಲಿ ತಿಳಿಸಿರುವಂತೆ ಆನ್‌ಲೈನ್ ಶಿಕ್ಷಣ ಕ್ರಮಗಳಿಗೆ ನಿಗದಿಪಡಿಸಿರುವ ಶುಲ್ಕವನ್ನು ಅನುಮೋದಿಸಲಾಯಿತು.**
2. **ಭಾರತೀಯ ವಿದ್ಯಾರ್ಥಿಗಳಿಗೆ ಪ್ರಸ್ತುತ ಆಫ್‌ಲೈನ್ ಕೋರ್ಸ್‌ಗಳಾದ ಯು.ಜಿ. ಮತ್ತು ಪಿ.ಜಿ. ಕೋರ್ಸ್‌ಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನೇ ಅಳವಡಿಸಿಕೊಳ್ಳುವುದು.**
3. **ವಿದೇಶಿ ವಿದ್ಯಾರ್ಥಿಗಳಿಗೆ ಭಾರತೀಯ ವಿದ್ಯಾರ್ಥಿಗಳ ವಿದ್ಯಾರ್ಹತೆಯ ತತ್ಸಮಾನ ವಿದ್ಯಾರ್ಹತೆಯನ್ನು Equivalence Committeeಯ ಶಿಫಾರಸ್ಸಿನ ಆಧಾರದ ಮೇಲೆ ಪರಿಗಣಿಸಲಾಗುವುದು.**

----

**ವಿಷಯ ಸಂಖ್ಯೆ: 61.04**

ವಿಷಯ: ಆನ್‌ಲೈನ್ ಶಿಕ್ಷಣಕ್ರಮಗಳಿಗೆ Programme Co-ordinators ಗಳನ್ನು ನೇಮಿಸಿರುವ ಬಗ್ಗೆ.

******

ವಿಶ್ವವಿದ್ಯಾನಿಲಯಕ್ಕೆ ಜುಲೈ 2023–24 ನೇ ಶೈಕ್ಷಣಿಕ ಸಾಲಿನಿಂದ ಹತ್ತು ಪದವಿ ಕಾರ್ಯಕ್ರಮಗಳನ್ನು (ಯುಜಿ–02, ಪಿಜಿ–08) ಆನ್‌ಲೈನ್ ಮೂಲಕ ಪ್ರಾರಂಭಿಸಲು F.No. 39-2/2023 (DEB-I) dated: 17.08.2023 ರಂತೆ ಯು.ಜಿ.ಸಿ. ಮಾನ್ಯತೆ ನೀಡಿದ್ದು ಸದರಿ ಶಿಕ್ಷಣಕ್ರಮಗಳಿಗೆ Programme Co-ordinators ಗಳನ್ನು ನೇಮಿಸಿಕೊಂಡು ವ್ಯವಸ್ಥಿತವಾಗಿ ಯುಜಿಸಿ ನಿಯಮಗಳನ್ವಯ ವಿವಿಯಲ್ಲಿ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭಿಸಲು ಆನ್‌ಲೈನ್ ಶಿಕ್ಷಣಕ್ರಮಗಳ ನಿರ್ದೇಶಕರ ಸಹಯೋಗದೊಂದಿಗೆ ಅಗತ್ಯ ರೂಪುರೇಷಗಳನ್ನು ಸಿದ್ದಪಡಿಸಲು ಕಚೇರಿ ಆದೇಶ ಸಂ:ಕರಾಮುವಿ/ಡೀನ್(ಶೈ)–COE-01/2023-24 dated: 30.08.2023 ರಂತೆ Programme Co-ordinators ಗಳನ್ನು ನೇಮಿಸಿದ್ದು, ಸದರಿ ಪ್ರಕ್ರಿಯೆಗೆ ಕೈಗೊಂಡಿರುವ ಕ್ರಮಕ್ಕೆ ಅನುಸಮರ್ಥನೆಗಾಗಿ ಮಾನ್ಯ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ:** ಆನ್‌ಲೈನ್ ಶಿಕ್ಷಣಕ್ರಮಗಳಿಗೆ Programme Co-ordinators ಗಳನ್ನು ನೇಮಿಸಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

----

ಕುಲಸಚಿವರು.

ಕುಲಪತಿಗಳು

**ವಿಷಯ ಸಂಖ್ಯೆ: 61.05**

ವಿಷಯ: 2021–22, 2022–23(ಜುಲೈ & ಜನವರಿ ಆವೃತ್ತಿ) ಹಾಗೂ 2023–24ನೇ (ಜುಲೈ ಆವೃತ್ತಿ) ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ನಡೆಸಲಾಗಿರುವ/ನಡೆಸಲಾಗುತ್ತಿರುವ ವಿವಿಧ ಶಿಕ್ಷಣಕ್ರಮಗಳ Academic Calendar ಅನುಮೋದನೆ ಕುರಿತು.

*****

2021–22, 2022–23(ಜುಲೈ & ಜನವರಿ ಆವೃತ್ತಿ) ಹಾಗೂ 2023–24ನೇ (ಜುಲೈ ಆವೃತ್ತಿ) ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ನಡೆಸಲಾಗಿರುವ/ನಡೆಸಲಾಗುತ್ತಿರುವ ವಿವಿಧ ಶಿಕ್ಷಣಕ್ರಮಗಳಿಗೆ Academic Calendar ಅನ್ನು ಸಮಿತಿಯು ದಿನಾಂಕ:16–08–2023ರಂದು ಸಭೆ ನಡೆಸಿ ಚರ್ಚಿಸಿ Academic Calendar ಅನ್ನು ಸಿದ್ಧಪಡಿಸಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಅಧಿಸೂಚನೆ ಹೊರಡಿಸಿರುವುದನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

**ತೀರ್ಮಾನ:** 2021–22, 2022–23(ಜುಲೈ & ಜನವರಿ ಆವೃತ್ತಿ) ಹಾಗೂ 2023–24ನೇ (ಜುಲೈ ಆವೃತ್ತಿ) ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ನಡೆಸಲಾಗಿರುವ/ನಡೆಸಲಾಗುತ್ತಿರುವ ವಿವಿಧ ಶಿಕ್ಷಣಕ್ರಮಗಳ Academic Calendar ಅನುಮೋದಿಸಲಾಯಿತು.

----

**ವಿಷಯ ಸಂಖ್ಯೆ: 61.06**

ವಿಷಯ: 2023–24ನೇ ಸಾಲಿಗೆ ಕರಾಮುವಿಯ ವಿವಿಧ ಆಫ್ ಲೈನ್ ಹಗೂ ಆನ್‌ಲೈನ್ ಶಿಕ್ಷಣ ಕ್ರಮಗಳಿಗೆ ಯು.ಜಿ.ಸಿ. ಯಿಂದ ಅಧಿಕೃತವಾಗಿ ಮಾನ್ಯತೆ ದೊರಕಿರುವ ಕುರಿತು.

*****

2023–24ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಲ್ಲಿ ಯುಜಿಸಿಯ ಇಮೇಲ್ ಪತ್ರಗಳ (ದಿನಾಂಕ:16.06.2023, 31.07.2023 ಹಾಗೂ 03.08.2023) ಆಧಾರದ ಮೇಲೆ ಕರಾಮುವಿಯ ವಿವಿಧ ಆಫ್ ಲೈನ್ ಹಾಗೂ ಆನ್‌ಲೈನ್ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ನಡೆಸಲಾಗುತ್ತಿತ್ತು. ಪ್ರಸ್ತುತ, F.No.30-30/2023 (DEB-III), dated: 11th September 2023 & F.No.39-2/ 2023 (DEB-I), dated: 17th August 2023 ರಂದು ಯುಜಿಸಿಯು ತನ್ನ ಜಾಲತಾಣದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 43 ಆಫ್‌ಲೈನ್ ಹಾಗೂ 10 ಆನ್‌ಲೈನ್ ಶಿಕ್ಷಣ ಕ್ರಮಗಳಿಗೆ ಮಾನ್ಯತೆ ಹೊಂದಿರುವುದಾಗಿ ಪ್ರಕಟಿಸಿದೆ ಸದರಿ ಮಾಹಿತಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗಾಗಿ ವಿಷಯ ಮಂಡಿಸಿದೆ.

**ತೀರ್ಮಾನ:** 2023–24ನೇ ಸಾಲಿಗೆ ಕರಾಮುವಿಯ ವಿವಿಧ ಆಫ್ ಲೈನ್ ಹಾಗೂ ಆನ್‌ಲೈನ್ ಶಿಕ್ಷಣ ಕ್ರಮಗಳಿಗೆ ಯು.ಜಿ.ಸಿ. ಯಿಂದ ಅಧಿಕೃತವಾಗಿ ಮಾನ್ಯತೆ ದೊರಕಿರುವ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಸಿಬ್ಬಂದಿಗಳು ಕಾರ್ಯನಿರ್ವಹಿಸುವುದು ಅವಶ್ಯವೆಂದು ತಿಳಿಸಿ ತೀರ್ಮಾನಿಸಲಾಯಿತು.

----

ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿತವಾದ ಇತರೆ ವಿಷಯ

**ವಿಷಯ ಸಂಖ್ಯೆ: 61.07**

**ವಿಷಯ:** 2021–22ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಸಿ.ಬಿ.ಸಿ.ಎಸ್ ಸ್ನಾತಕ ಕಾರ್ಯಕ್ರಮಗಳ ಪರೀಕ್ಷೆಯಲ್ಲಿ ಬಿಟ್ಟುಹೋಗಿರುವ ಐ.ಸಿ.ಹೆಚ್.ಆರ್ ಪತ್ರಿಕೆಯನ್ನು ಅಳವಡಿಸಕೊಂಡು ಪರೀಕ್ಷೆಯನ್ನು ನಡೆಸಲು ಅನುಮತಿ ಪಡೆಯುವ ಬಗೆಗೆ.

******

ವಿಶ್ವವಿದ್ಯಾನಿಲಯದಲ್ಲಿ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಸಿ.ಬಿ.ಸಿ.ಎಸ್ ಸ್ಕೀಂ ಕಾರ್ಯಕ್ರಮಗಳನ್ನು ಪರಿಚಯಿಸಿದ್ದು, ಸದರಿ ಸಾಲಿನಲ್ಲಿ ನಡೆದ ಸ್ನಾತಕ ಕಾರ್ಯಕ್ರಮಗಳ ಪರೀಕ್ಷೆಯಲ್ಲಿ ವಿವರಣಾ ಪುಸ್ತಕದಲ್ಲಿನ ವ್ಯತ್ಯೆಯದಿಂದಾಗಿ ಐ.ಸಿ.ಹೆಚ್.ಆರ್ ವಿಷಯದ ಪತ್ರಿಕೆಯ ಪರೀಕ್ಷೆಯನ್ನು ನಡೆಸಿರುವುದಿಲ್ಲ, ಈ ಸಂಬಂಧ ಉಂಟಾಗಿರುವ ಗೊಂದಲವನ್ನು ಬಗೆಹರಿಸಿಕೊಳ್ಳಲು ಮಾನ್ಯ ಡೀನ್ (ಶೈಕ್ಷಣಿಕ)ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು, ಸದರಿ ಸಮಿತಿಯು ದಿನಾಂಕ:08.08.2023ರ ಪೂರ್ವಾಹ್ನ 11.30 ಗಂಟೆಗೆ ಪರೀಕ್ಷಾ ವಿಭಾಗದ ಸಭಾ ಕೊಠಡಿಯಲ್ಲಿ ಸಭೆ ನಡೆಸಿ ಶಿಫಾರಸ್ಸು ಮಾಡಿರುವ ಅಂಶಗಳನ್ನೊಳಗೊಂಡಂತೆ ಸಭಾ ನಡವಳಿಯನ್ನು ವಿಶ್ವವಿದ್ಯಾನಿಲಯದ 61ನೇ ಶೈಕ್ಷಣಿಕ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಲು ಅನುಮೋದನೆ ಕೋರಲಾಗಿದೆ.

**ತೀರ್ಮಾನ:** ICHR and ES ವಿಷಯಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ Ordinance ಚಾಲ್ತಿಯಲ್ಲಿರುವಂತೆ ವಿವರಣಾ ಪುಸ್ತಕ ಸಿದ್ಧಗೊಂಡಿದೆ ಅದರಂತೆ Ordinance ಪ್ರಕಾರ ಪರೀಕ್ಷೆಯನ್ನು ನಡೆಸದೆ ಪ್ರತಿ ವಿಷಯಕ್ಕೆ ಎರಡು ಕ್ರೆಡಿಟ್‌ಗಳನ್ನು ಮಾತ್ರ ಅಂಕಪಟ್ಟಿಯಲ್ಲಿ ನಮೂದಿಸಿ ಅಂಕಪಟ್ಟಿಗಳನ್ನು ನೀಡುವುದು. ಮುಂದುವರೆದು, ಚಾಲ್ತಿಯಲ್ಲಿರುವ Ordinance ನ ತಿದ್ದುಪಡಿ ನಂತರ ಪರೀಕ್ಷಾ ನಡೆಸುವ ಬಗ್ಗೆ ಕ್ರಮವಹಿಸಲು ತೀರ್ಮಾನಿಸಲಾಯಿತು.

----

ಅಂತಿಮವಾಗಿ 61ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು